# ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 20 ಗ್ರಾನೀಸ (8)2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ **18.09.2014.**

**ಇವರಿಂದ :**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,

**ಇವರಿಗೆ :**

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ
   ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್,
   ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
   2ನೇ ಮಹಡಿ, ಕೆ.ಹೆಚ್.ಬಿ. ಕಾಂಪ್ಲೆಕ್ಸ್,
   ಕಾವೇರಿ ಭವನ, **ಬೆಂಗಳೂರು-09**

**ಮಾನ್ಯರೆ,**

ವಿಷಯ: 2014-15ನೇ ಸಾಲಿನ 2000 ನೀರು ಶುದ್ಧೀಕರಣ ಘಟಕಗಳ ಅಳವಡಿಕೆ ಸಂಬಂಧದ ವಿವರಗಳನ್ನು ನೀಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 86 ಗ್ರಾನೀಸ (5)2013, ದಿನಾಂಕ:24.05.2014.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 20 ಗ್ರಾನೀಸ(8)2014, ದಿನಾಂಕ:06.08.2014 ಮತ್ತು ಇದೇ ಟಿಪ್ಪಣಿ ಸಮ ಸಂಖ್ಯೆ ದಿನಾಂಕ:11.09.2014.
3. ದಿನಾಂಕ:17.09.2014ರಂದು ನಡೆದ ಜಿಲ್ಲಾ ಪಂಚಾಯಿತಿಗಳ ಉಪ ಕಾರ್ಯದರ್ಶಿಗಳ ಸಭೆಯಲ್ಲಿ ಸೂಚಿಸಲಾದಂತೆ.

---

2014-15ನೇ ಸಾಲಿನಲ್ಲಿ 2000 ನೀರು ಶುದ್ಧೀಕರಣ ಘಟಕ (WPP)ಗಳನ್ನು ಅಳವಡಿಸಲು ಉಲ್ಲೇಖ (1)ರಲ್ಲಿ ಆದೇಶ ಹೊರಡಿಸಿದೆ. ಇದರನ್ವಯ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಿ, ಸಮಸ್ಯಾತ್ಮಕ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಸರ್ಕಾರದ ಉದ್ದೇಶವನ್ನು ಸಾಫಲ್ಯಗೊಳಿಸುವ ನಿಟ್ಟಿನಲ್ಲಿ ಜಾಗ್ರತೆಯಾಗಿ ಕ್ರಮವಹಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ದಿಸೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಲ್ಲಿ ಕೆಲವು ಚುನಾಯಿತ ಜನ ಪ್ರತಿನಿಧಿಗಳು 2ನೇ ಅಕ್ಟೋಬರ್ 2014ರಂದು ಶುದ್ಧೀಕರಣ ಘಟಕಗಳ ಅಳವಡಿಕೆ ಪ್ರಕ್ರಿಯೆಗೆ ಚಾಲನೆ ನೀಡಲು ವಿನಂತಿಸಿರುತ್ತಾರೆ. ಆದ್ದರಿಂದ ಕಾಲಮಿತಿಯೊಳಗೆ ಶುದ್ಧೀಕರಣ ಘಟಕಗಳ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ ಇದರೊಂದಿಗೆ ಲಗತ್ತಿಸಲಾದ ಅನುಬಂಧದಲ್ಲಿ ಕೋರಲಾದ ವಿವರಗಳನ್ನು **ದಿನಾಂಕ:30.09.2014ರ ಕಾಲಮಿತಿಯೊಳಗೆ ಇ-ಮೇಲ್** ಮೂಲಕ ಸರ್ಕಾರಕ್ಕೆ ನೀಡುವಂತೆ ಕೋರಿದೆ.

ಉಲ್ಲೇಖಿತ (2)ರ ಪತ್ರ ಮತ್ತು ಟಿಪ್ಪಣಿಗಳಲ್ಲಿ ತಿಳಿಸಲಾದಂತೆ, CE/RWSSDರವರು **ಜನಸಂಖ್ಯಾವಾರು ಅಗತ್ಯವಿರುವ ಸಾಮರ್ಥ್ಯ, ತಂತ್ರಜ್ಞಾನದ** ವಿವರ, **ಅದರ ಅಂದಾಜು ವೆಚ್ಚ ಹಾಗೂ ಅನುಮೋದಿತ ಸಂಸ್ಥೆಗಳೊಂದಿಗೆ ಮಾಡಿಕೊಳ್ಳಬೇಕಾದ ಮಾದರಿ ಒಪ್ಪಂದ ಪತ್ರವನ್ನು** ಸಹ ಕೂಡಲೇ ಇ-ಮೇಲ್ ಮೂಲಕ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ನೀಡಿ, ಅದರ ಪ್ರತಿಯನ್ನು ಸರ್ಕಾರಕ್ಕೆ ನೀಡುವಂತೆ ಕೋರಿದೆ.

ತಮ್ಮ ವಿಶ್ವಾಸಿ,


(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
**ದೂ:080-2203 2806, ಫ್ಯಾಕ್ಸ್ 2220 3175**
ಇ-ಮೇಲ್ **rk3452000@gmail.com**


**ಪ್ರತಿಯನ್ನು:**

1. ರಾಜ್ಯದ ಎಲ್ಲಾ 4 RWSSD ವೃತ್ತಗಳ ಅಧೀಕ್ಷಕ ಇಂಜಿನಿಯರ್‌ರವರುಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
2. ರಾಜ್ಯದ ಎಲ್ಲಾ 30 RWSSD ಕಾರ್ಯಪಾಲಕ ಇಂಜಿನಿಯರ್‌ರವರುಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.

# 2014–15ನೇ ಸಾಲಿನ 2000 ನೀರು ಶುದ್ಧೀಕರಣ ಘಟಕ (WPP)ಗಳ ಅಳವಡಿಕೆ ವಿವರ.

ಜಿಲ್ಲೆ:– ತಾಲ್ಲೂಕು:–

| ಕ್ರ. ಸಂ | ಗ್ರಾಮ ಪಂಚಾಯತ್ | 01.04.2014ರ YDU ಪ್ರಕಾರ ನೀರಿನ ಗುಣಮಟ್ಟದ ಸಮಸ್ಯೆ ಹೊಂದಿರುವ ಜನವಸತಿಗಳ ಹೆಸರು | ಈಗಾಗಲೇ ವಿವಿಧ (MVS /PWS/MWS/WPP)ಯೋಜನೆಗಳಡಿ ಕಲಂ:3ರಲ್ಲಿನ ಜನವಸತಿ ಸೇರಿದ್ದಲ್ಲಿ ಅದರ ವಿವರ | ಪರ್ಯಾಯ ಸುರಕ್ಷಿತ ಜಲಮೂಲ ಇದೆಯೇ/ಇಲ್ಲವೇ ನಮೂದಿಸಬೇಕು. | ರಾಸಾಯನಿಕ ಕಲುಷಿತೆಯ ವಿವರ ಮತ್ತು ಹಂತ | ಜನಸಂಖ್ಯಾವಾರು ಅಗತ್ಯವಿರುವ ಘಟಕದ ಸಾಮರ್ಥ್ಯ | ಸ್ಥಳೀಯ ಅಗತ್ಯತೆ ಆಧರಿಸಿ ಅಳವಡಿಸಲು ಉದ್ದೇಶಿಸಿರುವ WPP ತಂತ್ರಜ್ಞಾನದ ವಿವರ | ಅನುಮೋದಿಸಲಾದ ಸಂಸ್ಥೆ NGO/Co-operative Agency/GP | WPP ಅಳವಡಿಸಲು ಸಿದ್ಧವಾಗಿರುವ ಕಟ್ಟಡ(ವಿದ್ಯುಚ್ಛಕ್ತಿ ಹಾಗೂ ನೀರಿನ ಸಂಪರ್ಕವನ್ನೊಳ ಗೊಂಡಿದೇ/ಇಲ್ಲವೇ) | YDU ನಲ್ಲಿ Not Tested ಎಂದಿರುವ ಜನವಸತಿಗಳಲ್ಲಿ ನೀರಿನ ಜಲಮೂಲಗಳನ್ನು ಅಂಗೀಕೃತ ನೀರು ಪರೀಕ್ಷಾ ಪ್ರಯೋಗಾಲಯದಲ್ಲಿ ಪರೀಕ್ಷಿಸಿ, ಪರೀಕ್ಷಾ ವರದಿಯನ್ನು ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿಕೊಂಡು YDUನಲ್ಲಿ ಇಂಧೀಕರಿಸಲಾಗಿದೆಯೇ; | ಚಾಲ್ತಿ ಮಾರ್ಗಸೂಚಿಗಳನ್ವಯ WPP ಅಳವಡಿಕೆ ಕುರಿತು ಶಿಫಾರಸ್ಸಿನೊಂದಿಗೆ ಅನುಮೋದನೆಗಾಗಿ ಕಳುಹಿಸುವ ಜನವಸತಿಯ ಜನ ಸಂಖ್ಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | | | | | | | | | | |

ವಿ.ಸೂ ತಾಲ್ಲೂಕುವಾರು ಪಟ್ಟಿ ನೀಡಬೇಕು. ಜನವಸತಿವಾರು ಸಂಪೂರ್ಣ ಮಾಹಿತಿ ನೀಡಬೇಕು. ಈಗಾಗಲೇ ಸರ್ಕಾರದಿಂದ ರವಾನಿಸಿರುವ / ಜಿಲ್ಲಾ ಪಂಚಾಯತ್‌ಗಳಲ್ಲಿ ಇತರೆ ಮೂಲಗಳಿಂದ ಚುನಾಯಿತ ಜನಪ್ರತಿನಿಧಿಗಳಿಂದ / ಸ್ವೀಕೃತಿಯಾಗಿರುವ ಮನವಿಗಳನ್ನು ಚಾಲ್ತಿ ನಿಯಮ /ಮಾರ್ಗಸೂಚಿಗಳನ್ವಯ ಪರಿಶೀಲಿಸಿ ಅರ್ಹತೆ ಅಥವಾ ಅನರ್ಹತೆಯನ್ನು ಸ್ಪಷ್ಟವಾಗಿ ಘೋಷಿಸಬೇಕು. ಅಪೂರ್ಣ ಪ್ರಸ್ತಾವನೆಗಳು ಮತ್ತು ಅಂತಿಮ ದಿನಾಂಕದ ಬಳಿಕ ಸ್ವೀಕೃತಿಯಾಗುವ ಪ್ರಸ್ತಾಪಗಳನ್ನು ಪರಿಗಣಿಸುವುದಿಲ್ಲ.

ಕಾರ್ಯಪಾಲಕ ಇಂಜಿನಿಯರ್,
RWSSD

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್